www.ecourtsindia.com

**ಸಿ.ಸಿ . 1036/2021** **ಪಿ.ಡಬ್ಲ್ಯೂ- 1**

**ದಿನಾಂಕಃ 29/10/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಎಸ್.ಎ. ವಕೀಲರಿಂದ**

ನನ್ನ ಪೂರ್ತಿ ಹೆಸರು ಎಂ.ಕೆ.ನಂಜುಂಡಸ್ವಾಮಿ. ನನ್ನ ತಂದೆಯ ಪೂರ್ತಿ ಹೆಸರು ಕೇಶವೇಗೌಡ. ನಾನು ಮೂಲತಃ ಮಂಗಳಾಪುರ ಗ್ರಾಮದವನು. ಸದರಿ ಮಂಗಳಾಪುರ ಹೊಳೆನರಸೀಪುರ ಪಟ್ಟಣದಿಂದ 3 ಕಿ.ಮೀ. ದೂರದಲ್ಲಿರುತ್ತದೆ. ನಾನು Fertilizer Business ಮಾಡುತ್ತೇನೆ. ನಾನು ಮಾಡುವ ವ್ಯಾಪಾರ ವರ್ಷದ 365 ದಿನವೂ ನಡೆಯುವಂತಹ ವ್ಯಾಪಾರ ಅಲ್ಲ ಎಂದರೆ ಸರಿಯಲ್ಲ. ನೀವು ಮಾರಾಟ ಮಾಡುತ್ತೀರಿ ಎನ್ನುವ ಗೊಬ್ಬರವನ್ನು ಸಾಮಾನ್ಯವಾಗಿ ಮಳೆ ಆಗುವ ಸಮಯದಲ್ಲಿ ಮಾತ್ರ ಖರೀದಿಸುತ್ತಾರೆ ಎಂದರೆ ಸಾಕ್ಷಿಯು ಈಗ ಕೊಳವೆ ಬಾವಿಗಳು ಇರುವುದರಿಂದ ಸಾಮಾನ್ಯವಾಗಿ ಎಲ್ಲಾ ಸಮಯದಲ್ಲಿಯೂ ಖರೀದಿಸುತ್ತಾರೆ ಎಂದು ನುಡಿಯುತ್ತಾರೆ.

ನಾನು ಬಿ.ಕಾಂ. ಪದವೀಧರನಾಗಿರುತ್ತೇನೆ. ನಾನು ಸದರಿ Fertilizer Business ಅನ್ನು ಆರಂಭಿಸುವ ಮುನ್ನಾ ಬೇರೆ ಯಾವುದೇ Business ಅನ್ನು ಮಾಡುತ್ತಿರಲಿಲ್ಲ. ನಾನು ಸದರಿ Business ಅನ್ನು ಹೊಳೆನರಸೀಪುರ ಪಟ್ಟಣ ಪುರಸಭೆ ವ್ಯಾಪ್ತಿಯೊಳಗೆ ಬರುವ ಜಾಗದಲ್ಲಿ ಮಾಡುತ್ತಿದ್ದೇನೆ ಎಂದರೆ ಸರಿ. ಹೊಳೆನರಸೀಪುರ ಪುರಸಭೆ ವ್ಯಾಪ್ತಿಗೆ ಒಳಪಟ್ಟಂತೆ Business ಮಾಡುತಂವಹ ನನ್ನ ಯಾವುದೇ ಕಟ್ಟಡಗಳು ಇಲ್ಲ ಎಂದರೆ ಸರಿ. ನಾನು ಸದರಿ Business ಅನ್ನು ಹಾಸನ-ಮೈಸೂರು ರಸ್ತೆಯಲ್ಲೇ ಮಾಡುತ್ತೇನೆ. ನಾನು ಅದನ್ನು ಮಾಡುತ್ತಿರುವ ಕಟ್ಟಡದ ಮಾಲೀಕರ ಹೆಸರು ಎಸ್.ಎನ್.ಜಯಮ್ಮ. ನಾನು ವ್ಯಾಪಾರ ಮಾಡುವ ಉದ್ದೇಶಕ್ಕೆ ಸದರಿ ಜಯಮ್ಮರವರೊಂದಿಗೆ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ. ಸದರಿ ಕರಾರು ಪತ್ರವನ್ನು 2007ನೇ ಇಸವಿಯಲ್ಲಿ ಮಾಡಿದ್ದು, ಪ್ರತಿ ವರ್ಷವೂ ಅದನ್ನು ಬದಲಾಯಿಸುತ್ತಿರುತ್ತೇನೆ.

ನಾನು ಮಾಡುತ್ತಿರುವ ವ್ಯವಹಾರಕ್ಕೆ ಪುರಸಭೆಯಿಂದ ಪರವಾನಗಿಯನ್ನು ಪಡೆದುಕೊಳ್ಳಬೇಕು ಎನ್ನುವ ವಿಚಾರ ನನಗೆ ತಿಳಿದಿದೆ. ನಾನು ಮಾಡುತ್ತಿರುವ Business ಗೆ ಆ ರೀತಿ ಪರವಾನಗಿಯನ್ನು ಪಡೆದುಕೊಂಡಿರುತ್ತೇನೆ. ನಾನು ಪಡೆದುಕೊಂಡಿರುವ ಪರವಾನಗಿಯನ್ನಾಗಲೀ ಅಥವಾ ಮಾಲೀಕರಿಂದ ಮಾಡಿಸಿಕೊಂಡ ಕರಾರು ಪತ್ರವನ್ನಾಗಲೀ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KAHS710018972021/truecopy/order-2.pdf

ಸದರಿ ಕಟ್ಟಡದಲ್ಲಿ ನನ್ನ ಅಂಗಡಿ ಇದೆ ಎನ್ನುವುದನ್ನು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಾನು ಫಿರ್ಯಾದಿನಲ್ಲಿ ನನ್ನ ಅಂಗಡಿ ಬಿ.ಹೆಚ್ ರಸ್ತೆ ಅಂದರೆ ಹಾಸನ-ಬಿಳಿಕೆರೆ ರಸ್ತೆಯಲ್ಲಿ ಇರುವುದಾಗಿ ಬರೆಸಿರುತ್ತೇನೆ. ನಾನು Fertilizer Business ಅನ್ನು ಆರಂಭಿಸುವ ಮುಂಚೆ ನನ್ನ ಸಂಬಂಧಿಕರಾದ ಜಯಮ್ಮರವರ ಗಿರಣಿ ಇದ್ದು ಅದನ್ನು ನೋಡಿಕೊಳ್ಳುತ್ತಿದ್ದೆನು. ಸದರಿ ಗಿರಣಿಯನ್ನು ನೀವು ಸಂಬಳಕ್ಕಾಗಿ ನೋಡಿಕೊಳ್ಳುತ್ತಿದ್ದಿರೇ ಅಥವಾ ಉಚಿತವಾಗಿ ನೋಡಿಕೊಳ್ಳುತ್ತಿದ್ದಿರೇ ಎಂದರೆ ಸಾಕ್ಷಿಯು ಸದರಿ ಜಯಮ್ಮರವರು ನನಗೆ ಅತ್ತೆಯಾಗಬೇಕು ಅವರು ನನ್ನ ಸಂಬಂಧಿಕರಾಗಿರುವುದರಿಂದ ನಾನು ಸದರಿ ಗಿರಿಣಿಯನ್ನು ಹಾಗೆಯೇ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ.

ಸದರಿ ಗಿರಣಿಗೆ ಬಂಡವಾಳ ಹೂಡಿಕೆಯನ್ನು ನನ್ನ ಅತ್ತೆ ಮಾಡಿದ್ದರು. ಸದರಿ ಗಿರಣಿಗೆ ನಿಮ್ಮ ಅತ್ತೆ ಬಂಡವಾಳ ಹೂಡಿದ್ದರಿಂದ ಅದರ ಎಲ್ಲಾ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಹೌದು ಆದರೆ ನಾನು ಮದುವೆಯಾಗಿ ಬಂದ ನಂತರ ನಾನು ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಗಿರಣಿಯು ಕೂಡ ನಾನು ಪ್ರಸ್ತುತ ನಡೆಸುತ್ತಿರುವ Fertilizer Business ಅಂಗಡಿಯ ಸ್ಥಳದಲ್ಲಿಯೇ ಇತ್ತು. ನನಗಾಗಲೀ ನನ್ನ ಅತ್ತೆಗಾಗಲೀ ಸದರಿ ಗಿರಿಣಿ ಹಾಗೂ Fertilizer Business ಅನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಇರುವುದಿಲ್ಲ.

ಗಿರಣಿಯನ್ನು ನಡೆಸಿದರೆ ಅದರಿಂದ ಬರುವ ಆದಾಯ ಒಂದು ಕುಟುಂಬದವರು ಜೀವನ ಮಾಡಲು ಮಾತ್ರ ಸಾಕಾಗುತ್ತದೆ ಎಂದರೆ ಸರಿ. ನಾನು Fertilizer shop ಅನ್ನು 2007 ರಲ್ಲಿ ಆರಂಭಿಸಿರುತ್ತೇನೆ. ಸದರಿ Fertilizer Business ನಲ್ಲಿ ಕಮೀಷನ್ ಏಜೆಂಟ್ ಗಳು ಗೊಬ್ಬರವನ್ನು ನಮಗೆ ನೀಡುತ್ತಾರೆ ನಾವು ಸದರಿ ಗೊಬ್ಬರವನ್ನು ಮಾರಾಟ ಮಾಡಿ ನಂತರ ಹಣವನ್ನು ಅವರಿಗೆ ಕೊಡಬೇಕು ಎಂದರೆ ಸರಿ. ಸದರಿ Fertilizer Business ನಲ್ಲಿ ನಿಮಗೆ ಬರುವ ಆದಾಯ ಅಥವಾ ಕಮೀಷನ್ ತುಂಬಾ ಕಡಿಮೆ ಇರುತ್ತದೆ ಎಂದರೆ ಸಾಕ್ಷಿಯು ನಾವು ಸದರಿ ವ್ಯವಹಾರವನ್ನು ನಡೆಸುವುದರ ಮೇಲೆ ಅದು ಅವಲಂಬಿತವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ Fertilizer ಶಾಪ್ ನಲ್ಲಿ ನಮಗೆ ಬಂದ ಗೂಡ್ಸ್, ನಾವು ಮಾರಾಟ ಮಾಡಿದ ಗೂಡ್ಸ್ ಹಾಗೂ ನಮಗೆ ಬಂದ ಹಣಕ್ಕೆ ಸಂಬಂಧಿಸಿದಂತೆ ರಿಜಿಸ್ಟರನ್ನು ಇಟ್ಟುಕೊಂಡಿರುತ್ತೇವೆ ಎಂದರೆ ಸರಿ. ಸದರಿ ರಿಜಿಸ್ಟರ್ ಈಗಲೂ ನನ್ನ ಬಳಿ ಇದೆ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KAHS710018972021/truecopy/order-2.pdf

ನಿಮಗೆ ಸದರಿ Fertilizer Business ನಿಂದ ಒಂದು ತಿಂಗಳ ಆದಾಯ ಎಷ್ಟು ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ ಅದನ್ನು ಆಡಿಟರ್ ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಗೊಬ್ಬರ ಅಂಗಡಿಯಲ್ಲಿ ಕೈಬರಹದ ಬಿಲ್ಲನ್ನು ಕೊಡಲಾಗುತ್ತದೆಯೇ ಅಥವಾ ಕಂಪ್ಯೂಟರ್ ಜನರೇಟೆಡ್ ಬಿಲ್ಲನ್ನು ಕೊಡಲಾಗುತ್ತದೆಯೇ ಎಂದೆ ಸಾಕ್ಷಿಯು ಗ್ರಾಹಕರ ಆಧಾರ್ ನಂಬರನ್ನು ನೋಟ್ ಮಾಡಿ ಕಂಪ್ಯೂಟರ್ ಜನರೇಟೆಡ್ ಬಿಲ್ಲನ್ನು ಕೊಡಲಾಗುತ್ತದೆ ಎಂದು ನುಡಿಯುತ್ತಾರೆ. ನಾನು ಮಾರಾಟ ಮಾಡುವ ಎಲ್ಲಾ ಗೊಬ್ಬರಕ್ಕೂ ಬಿಲ್ಲನ್ನು ನೀಡಿಯೇ ಮಾರಾಟ ಮಾಡುತ್ತೇನೆ ಎಂದರೆ ಸರಿ. ಆ ರೀತಿಯ ಬಿಲ್ಲುಗಳನ್ನು ಯಾವ ವರ್ಷದಿಂದ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು 2018 ರಲ್ಲಿ ಸರ್ಕಾರದ ಆದೇಶ ಆಗಿದ್ದು ಅಲ್ಲಿಂದ ಆ ರೀತಿಯ ಬಿಲ್ಲುಗಳನ್ನು ಮಾಡಲಾಗುತ್ತಿದೆ ಎಂದು ನುಡಿಯುತ್ತಾರೆ. 2020-21ರ ಸಾಲಿನ ನಕಲು ಬಿಲ್ಲುಗಳು ನನ್ನಲ್ಲಿ ಇರುತ್ತದೆ. ನಾವು ನೀಡುವ ಪ್ರತಿಯೊಂದು ಬಿಲ್ ನಲ್ಲಿಯೂ ಗ್ರಾಹಕರ ಹೆಸರು ಬರುತ್ತದೆ.

ನಾನು ಸದರಿ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಎನ್ನುವ ಸಮಯದಲ್ಲಿ ನಾನು ಎಸ್.ಬಿ.ಐ. ಬ್ಯಾಂಕ್ ನಲ್ಲಿ ಮಾತ್ರ ಖಾತೆಯನ್ ನುಹೊಂದಿದ್ದೆನು. ಪ್ರಸ್ತುತ ನಾನು ಹೊಳೆನರಸೀಪುರದ ಎಸ್.ಬಿ.ಐ. ಹಾಗೂ ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆಗಳನ್ನು ಹೊಂದಿರುತ್ತೇನೆ. ಸದರಿ ಗಿರಣಿಯಲ್ಲಿ ಕೆಲಸ ಮಾಡುವ ಸಮಯದಲ್ಲಿ ನಾನು ಹಣವನ್ನು ಇಟ್ಟುಕೊಳ್ಳುವ ಹಾಗೂ ತೆಗೆಯುವ ಉದ್ದೇಶಕ್ಕೆ ಸದರಿ ಎಸ್.ಬಿ.ಐ. ಬ್ಯಾಂಕ್ ನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದೆನು. ಸದರಿ ಗಿರಣಿಯಲ್ಲಿ ಇದ್ದ ಸಮಯದಲ್ಲಿ ನಾನು ಯಾರಿಗೂ ಕೂಡ ಚೆಕ್ ಮೂಲ ಹಣವನ್ನು ಕೊಟ್ಟಿಲ್ಲ ಹಾಗೆಯೇ ನನಗೂ ಯಾರೂ ಯಾವುದೇ ಹಣವನ್ನು ಚೆಕ್ ಮೂಲಕ ನೀಡಿಲ್ಲ.

ನಾನು ರಸಗೊಬ್ಬರದ ಅಂಗಡಿಯನ್ನು ಮಾಡಿದ ನಂತರ ಚೆಕ್ ವ್ಯವಹಾರವನ್ನು ಆರಂಭಿಸಿರುತ್ತೇನೆ. ನಾನು ಗೊಬ್ಬರದ ಅಂಗಡಿಗೆ ಗೂಡ್ಸ್ ಬರುವುದಕ್ಕೆ ಸಂಬಂಧಪಟ್ಟ ವ್ಯವಹಾರವನ್ನು ಚೆಕ್ ಹಾಗೂ ಆರ್.ಟಿ.ಜಿ.ಎಸ್. ಮುಖಾಂತರ ಮಾಡಿರುತ್ತೇನೆ. ನಾನು ಯಾವತ್ತು ಕೂಡ ಬಡ್ಡಿಗಾಗಿ ಸಾಲ ಕೊಡುವುದು ಹಾಗೂ ಬಡ್ಡಿ ಸಾಲ ಪಡೆದುಕೊಳ್ಳುವುದು ಮಾಡಿಲ್ಲ. ನೀವು ನಿಮ್ಮ ಅತ್ತೆಯವರ ರಸಗೊಬ್ಬರ ಅಂಗಡಿಯನ್ನು ನೋಡಿಕೊಳ್ಳಲು ಪ್ರಾರಂಭಿಸಿದ ನಂತರ ಅದಕ್ಕೆ ಸಂಬಂಧಪಟ್ಟ ಎಲ್ಲಾ ಹಣಕಾಸಿನ ವ್ಯವಹಾರವನ್ನು ನಿಮ್ಮ ಅತ್ತೆಯ ಹೆಸರಿನಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾನು ನನ್ನ ಹೆಸರಿನಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ ಸಾಕ್ಷಿಯು ಮುಂದುವರಿದು ಸದರಿ ರಸಗೊಬ್ಬರದ ಅಂಗಡಿ ನನ್ನ ಅತ್ತೆ ಹೆಸರಿನಲ್ಲಿರುವುದಿಲ್ಲ,

This is a True Copy of the Court Records Online. Authenticated @ districts.ecourtsindia.com/cnr/KAHS710018972021/truecopy/order-2.pdf
www.ecourtsindia.com

ಅದು ನನ್ನ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಅಂಗಡಿಯದಲ್ಲಿ ಎಲ್ಲಾ ಸರಕುಗಳು ಬಿಲ್ಲನ್ನು ಪಾವತಿಸಿದ ನಂತರ ಎಷ್ಟು ಆದಾಯ ಬರುತ್ತದ ಎಂದರ ಸಾಕ್ಷಿಯು ಅದನ್ನು ಹೇಳಲು ಬರುವುದಿಲ್ಲ ಆಡಿಟರ್ ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ ನಾನು ನನ್ನ ಹೆಸರಿನಲ್ಲಿರುವ ಅಂಗಡಿಯನ್ನು ಖುದ್ದು ನಾನೇ ನೋಡಿಕೊಳ್ಳುತ್ತೇನೆ. ನಮ್ಮ ಅಂಗಡಿಗೆ ಬಂದ ಗ್ರಾಹಕರ ನಗದು ಹಣವನ್ನು ನಾನೇ ಸ್ವೀಕರಿಸುತ್ತೇನೆ ಎಂದರೆ ಸರಿ. ಗ್ರಾಹಕರಿಗೆ ಸರಕನ್ನು ನೀಡಿದ ನಂತರ ಮೂಲ ಬಂಡವಾಳದಲ್ಲಿ ಎಷ್ಟು ಆದಾಯ ಉಳಿಯುತ್ತದೆ ಎಂದು ತಿಳಿದು ಬರುತ್ತದೆ ಎಂದರೆ ಸರಿ. ನೀವು ಹೇಳಿದ ಪ್ರಕಾರ ಯಾವುದೇ ಗಿರಣಿ ಅಂಗಡಿಯಾಗಲೀ ಅಥವಾ ರಸಗೊಬ್ಬರ ಅಂಗಡಿಯಾಗಲೀ ನಿಮ್ಮ ಹೆಸರಿನಲ್ಲಾಗಲೀ ನಿಮ್ಮ ಅತ್ತೆಯ ಹೆಸರಿನಲ್ಲಾಗಲೀ ಇಲ್ಲಿಯವರೆಗೂ ಇರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ನಿಮಗೆ ಯಾರ ಮೂಲಕ ಪರಿಚಯಸ್ಥರು ಎಂದರೆ ಸಾಕ್ಷಿಯು ಸಾಮಾನ್ಯ ಗ್ರಾಹಕರಂತೆ ಆರೋಪಿ ಕೂಡ ರಸಗೊಬ್ಬರ ಖರೀದಿಸಲು ಅಂಗಡಿಗೆ ಬರುತ್ತಿದ್ದರಿಂದ ಅವರು ನನಗೆ ಪರಿಚಯಸ್ಥರು ಎಂದು ನುಡಿಯುತ್ತಾರೆ. ಆರೋಪಿ ನನಗೆ 2007 ರಿಂದಲೂ ಪರಿಚಯಸ್ಥರು. ಯಾರಾದರೂ ಬಂದು ನನ್ನಲ್ಲಿ ಅವರ ಸಾಲವನ್ನು ತೀರಿಸುವ ಉದ್ದೇಶಕ್ಕೆ ಹಣವನ್ನು ಕೇಳಿದ್ದಲ್ಲಿ ನಾನು ಕೊಡುವುದಿಲ್ಲ. ನನ್ನಲ್ಲಿ ತೀರ ಹತ್ತಿರದ ಪರಿಚಯಸ್ಥರು ಬಂದು ರಸಗೊಬ್ಬರನ್ನು ಸಾಲವಾಗಿ ಕೇಳಿದರೆ ಕೊಡುತ್ತೇನೆ. ಆರೋಪಿ ನನಗೆ ತುಂಬಾ ಹತ್ತಿರದ ಪರಿಚಯಸ್ಥರು. ಆರೋಪಿಯ ತಂದೆ ಹೆಸರು ಸಣ್ಣಸ್ವಾಮಿ. ಅವರ ತಾಯಿ ಹಾಗೂ ಪತ್ನಿಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಆರೋಪಿ ವ್ಯವಸಾಯ ಮಾಡುತ್ತಾರೆ ಅದನ್ನು ಹೊರತುಪಡಿಸಿ ಯಾವ ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಹೆಸರಿನಲ್ಲಿ ವ್ಯವಸಾಯದ ಭೂಮಿ ಇದೆಯೇ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಜಮೀನುದಾರರ ಜಮೀನಿನಲ್ಲಿ ಕೂಲಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.

This is a True Copy of the Court Records Online. Authenticated @ districts.ecourtsindia.com/cnr/KAHS710018972021/truecopy/order-2.pdf